Electrification of Villages in Dharwar District

50. Sri B. G. BANAKAR (Hirekerur).—

Will the Minister for Public Works and Electricity be pleased to state:—

(*a*) the number of villages for which village electrification is sanctioned in Dharwar District;

(*b*) the number of villages where electrification work is completed and where it is incomplete;

(*c*) whether the electrification work is intended to be undertaken by the Department or through private contractors ?

Sri H. M. CHANNABASAPPA (Minister for Public Works and Electricity).—

(*a*) 420 during 1971–72 and 1972–73.

(*b*) 166 villages have been electrified, while 254 have to be electrified.

(*c*) Generally by Mysore State Electricity Board. The Board has however engaged private contrctors on a small scale to supplement the Bord's efforts.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ತಾವು (ಅ) ಗೆ ಉತ್ತರವಾಗಿ ಇನ್ನೂ 254 ಗ್ರಾಮಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿದೆ ಎಂದು ಹೇಳಿದ್ದೀರಿ. ಅವುಗಳನ್ನು ಎಷ್ಟು ಅವಧಿಯಲ್ಲಿ ಪೂರ್ತಿಗೊಳಿಸುತ್ತೀರಿ ಎನ್ನುವುದನ್ನು ಹೇಳುತ್ತಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರೋಗ್ರಾಂನಲ್ಲಿ ಯಾವ ಯಾವ ಅವಧಿಯಲ್ಲಿ ಪೂರೈಸಬೇಕು ಎಂದು ನಿರ್ಧಾರ ಮಾಡಿದ್ದಾರೋ ಆ ಅವಧಿಯಲ್ಲಿ ಪೂರೈಸುತ್ತಾರೆ.

ಶ್ರೀ ಗೋಪೀನಾಥ್ ಆರ್. ಸಾಂದ್ರ.—ತಮ್ಮ ಉತ್ತರದಲ್ಲಿ 1971–72 ನೇ ಹಾಗೂ 1972-73 ನೇ ಸಾಲುಗಳಲ್ಲಿ 420 ಗ್ರಾಮಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಹೇಳಿದ್ದೀರಿ. ಈ 420 ಅನ್ನುವ ಫಿಗರ್ ಒಳ್ಳೆಯದಲ್ಲ. ಆದುದರಿಂದ ಇನ್ನೂ 1–2 ಗ್ರಾಮಗಳನ್ನು ಹೆಚ್ಚು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆ ರೀತಿ ಫಿಗರ್ಸ್ ಇರುವುದು ಏನೂ ತಪ್ಪಲ್ಲ ಎಂದು ನನ್ನ ಭಾವನೆ.

ಶ್ರೀ ಗೋಪಿನಾಥ ಆರ್. ಸಾಂದ್ರ.—ನೂರಾರು ಹತ್ತಾರು ಹಳ್ಳಿಗಳಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಿದ್ದೇವೆಂದು ಹೇಳಿದ್ದಾರೆ. ಈ ಗ್ರಾಮಗಳಲ್ಲಿ ಅನೇಕ ಕಡೆ ಟೆಂಪೊರರಿ ಲೈನ್ಸ್ ಎಳೆದಿದ್ದಾರೆ. ಆದರಿಂದಾಗಿ ಸರಿಯಾಗಿ ಕೆಲಸ ಮಾಡದೆ ಇವೆ. ಆದ್ದರಿಂದ ಟೆಂಪೊರರಿ ಲೈನ್ಸ್ ತೆಗೆದು ಪರ್ಮನೆಂಟ್ ಲೈನ್ಸ್ ಹಾಕುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಹೇಳುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಪಕ್ಕಾ ವ್ಯವಸ್ಥೆ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ ಟೆಂಪೊರರಿ ಲೈನ್ ಹಾಕಿದ್ದಾರೆಂದು ಮಾನ್ಯ ಸದಸ್ಯರು ಹೇಳುವುದು ನನಗೆ ಅರ್ಥವಾಗಿಲ್ಲ.

ಶ್ರೀ ಗೋಪಿನಾಥ ಆರ್. ಸಾಂದ್ರ.—ಹುಬ್ಬಳ್ಳಿ ತಾಲ್ಲೂಕಿನ ಸಿರುಗುಪ್ಪ ಮೊದರಾದ ಗ್ರಾಮಗಳಲ್ಲಿ ನಾಲ್ಕು ವರ್ಷಗಳ ಹಿಂದೆ ಎಲೆಕ್ಟ್ರಿಫಿಕೇಷನ್ ಆಗಿದೆ. ಈ ಹೊತ್ತಿನವರೆಗೂ ಟೆಂಪೊರರಿ ಲೈನ್ ಇದೆ. ಆದರಿಂದ ಫ್ಯೂಸ್ ಹೋಗುವುದಲ್ಲದೆ ಬಲ್ಬುಗಳು ಸಹ ಹೋಗುತ್ತಿವೆ ಮತ್ತು ಅನೇಕ ಅನಾಹುತಗಳಾಗುತ್ತಿವೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಈ ವಿಷಯ ತಿಳಿಸಿದ್ದಾಗ್ಯೂ ಇನ್ನೂ ಏನೂ ಕೆಲಸ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಈಗಲಾದರೂ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೋಲ್ಟ್ರೇಜ್ ಕಡಮೆಯಾಗುವುದರಿಂದ ಅನಾಹುತಗಳಾಗುತ್ತವೆಯೇ ವಿನಾ ಲೈನ್ ಚೆಂಪೊರರಿಯಾಗಿ ಹಾಕಿದ್ದಾರೆನ್ನುವುದರಿಂದ ಆಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳತಕ್ಕ ವಿಷಯವನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಪ್ರೈವೇಟ್ ಕಂಟ್ರಾಕ್ಟರುಗಳಿಗೆ ಕೆಲವು ಕಡೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯೊಳಗೆ ಎಷ್ಟು ಕೊಟ್ಟಿದ್ದಾರೆ ಎಂದು ಹೇಳುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಧಾರವಾಡ ಜಿಲ್ಲೆಯೊಳಗೆ 17 ಕೊಟ್ಟಿದ್ದೇವೆ.

Construction of Road and Bridge near Chickmagalur

75. **Sri K. N. VEERAPPA GOWDA** (Sringeri).—

Will the Minister for Public Works and Electricity be pleased to state:—

Since N.R. Pura-Chickamagalur P.W. D. Road along with Tadasa bridge was submerged while constructing the Bhadra Project, the reason for stoppage of work so far relating to N. R. Pura-Balehonnur road *via* Honkodige and the bridge across Bhadra River near Kusugal connecting Chickmagalur which was taken up to replace the road Submerged?

Sri H. M. CHANNABASAPPA (Minister for Public Works and Electricity).—

As the road from Tarikere to N. R. Pura *via* Tadasa is submerged, a bridge near Lakkavalli and N. R. Pura and a road from Tarikere to N. R. Pura *via* Umblebail is constructed.

A proposal to construct a bridge each across Bhadra River and Somavahini Stream near Kusugal and to construct a road from N. R. Pura to Balehonnur 5th mile *via* 30th mile Chickmagalur old road is under the consideration of the Government.

ಶ್ರೀ ಕೆ. ಎನ್. ವೀರಪ್ಪಗೌಡ.—ತರೀಕೆರೆಯಿಂದ ತಡಸ ಮಾರ್ಗವಾಗಿ ಹೋಗುವ ರಸ್ತೆ ಮುಳುಗಡೆಯಾಗಿರುವುದರಿಂದ ಬೇರೆ ರಸ್ತೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನಾನು ಕೇಳುತ್ತಿರುವುದು, ನರಸಿಂಹರಾಜಪುರದಿಂದ ನೇರವಾಗಿ ಚಿಕ್ಕಮಗಳೂರಿಗೆ ಹೋಗುವ ರಸ್ತೆ ಮಾಡುವುದಲ್ಲದೆ ಕೂನುಗರ್ ಬಳಿ ಒಂದು ಸೇತುವೆ ಆಗಬೇಕೆಂದು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ಗಮನಕ್ಕೆ ಬಂದಿದೆ. ಕೂನುಗರ್ ಮಾರ್ಗವಾಗಿ ಸ್ವಲ್ಪ ಅಲೈನ್‌ಮೆಂಟ್ ಬದಲಾವಣೆ ಮಾಡಬೇಕು ಎನ್ನುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಸ್ವಲ್ಪ ನಿಧಾನವಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ನರಸಿಂಹರಾಜಪುರ ಬಾಳೆಹೊನ್ನೂರು ರಸ್ತೆಯ ಐದನೇ ಮೈಲಿಯಿಂದ ಒಂದು ರಸ್ತೆ ನಿರ್ಮಾಣ ಮಾಡಲಿರುವುದಾಗಿ ಉತ್ತರದಲ್ಲಿ ಹೇಳಿದ್ದಾರೆ. ಆರನೇ ಫರ್ಲಾಂಗಿನಿಂದ ಐದು ಕಿಲೋಮೀಟರ್ ರಸ್ತೆಯಾಗಿದ್ದು ಯಾರೋ ಒಬ್ಬ ವ್ಯಕ್ತಿಯ ಮನೆ ಮುಂದೆ ಆ ರಸ್ತೆ ಹೋಗಬೇಕು ಎನ್ನುವ ಉದ್ದೇಶದಿಂದ ತಕರಾರು ಮಾಡಿದಾಗ ಆ ಕೆಲಸ ನಿಂತು ಹೋಗಿ ಪುನಃ ಐದನೇ ಮೈಲಿಯಿಂದ ರಸ್ತೆ ಮಾಡಬೇಕು ಎನ್ನುವ ಯೋಜನೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?